# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 07 |
| ಸದಸ್ಯರ ಹೆಸರು | : | **ಶ್ರೀ ಪ್ರತಾಪ್ ಸಿಂಹ ನಾಯಕ್. ಕೆ (ವಿಧಾನಸಭೆಯಿಂದಚುನಾಯಿತರಾದವರು)** |
| ಉತ್ತರಿಸುವ ಸಚಿವರು | : | ಮಾನ್ಯ ಗಣಿ ಮತ್ತು ಭೂ ವಿಜ್ಞಾನ, ತೋಟಗಾರಿಕೆ ಸಚಿವರು. |
| ಉತ್ತರಿಸುವ ದಿನಾಂಕ | : | 04.07.2023 |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ ಅಡಿಕೆ ತೋಟಗಳಿಗೆ ಎಲೆ ಚುಕ್ಕಿ ಮತ್ತು ಹಳದಿ ರೋಗ ಹರಡಿರುವುದರಿಂದ ಅಡಿಕೆ ಬೆಳೆಗಾರರು ಸಂಕಷ್ಟಕ್ಕೀಡಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಸರ್ಕಾರದ ಗಮನಕ್ಕೆ ಬಂದಿದೆ.</td></tr>
<tr><td>ಆ)</td><td>ಬಂದಿದ್ದಲ್ಲಿ ಎಲೆ ಚುಕ್ಕಿ ಮತ್ತು ಹಳದಿ ರೋಗ ಬಾಧೆಯಿಂದಾಗಿ ಎಷ್ಟು ವಿಸ್ತೀರ್ಣದ ಅಡಿಕೆ ತೋಟ ಹಾನಿಗೀಡಾಗಿದೆ; (ಜಿಲ್ಲಾವಾರು ವಿವರ ನೀಡುವುದು)</td><td>ಎಲೆ ಚುಕ್ಕೆ ರೋಗ ಬಾಧೆಯಿಂದ ಹಾನಿಗೀಡಾದ ಅಡಿಕೆ ತೋಟಗಳ ಜಿಲ್ಲಾವಾರು ವಿವರ ಕೆಳಗಿನಂತಿದೆ. (2022-23)
<table>
<tr><th>ಜಿಲ್ಲೆ</th><th>ಹಾನಿಗೀಡಾದ ಪ್ರದೇಶ (ಹೆಕ್ಟೇರ್‌ಗಳಲ್ಲಿ)</th></tr>
<tr><td>ಚಿಕ್ಕಮಗಳೂರು</td><td>20,000</td></tr>
<tr><td>ಶಿವಮೊಗ್ಗ</td><td>12,500</td></tr>
<tr><td>ಉತ್ತರ ಕನ್ನಡ</td><td>4,044</td></tr>
<tr><td>ಹಾಸನ</td><td>4,200</td></tr>
<tr><td>ದಕ್ಷಿಣ ಕನ್ನಡ</td><td>1,100</td></tr>
<tr><td>ಉಡುಪಿ</td><td>160</td></tr>
<tr><td>ಕೊಡಗು</td><td>500</td></tr>
<tr><td>ಒಟ್ಟು</td><td>42,504</td></tr>
</table>
ಅಡಿಕೆ ಹಳದಿ ಎಲೆ ರೋಗದ ಬಾಧೆಯಿಂದ ಹಾನಿಗೀಡಾದ ಅಡಿಕೆ ತೋಟಗಳ ಜಿಲ್ಲಾವಾರು ವಿವರ ಕೆಳಗಿನಂತಿದೆ.
<table>
<tr><th>ಜಿಲ್ಲೆ</th><th>ಹಾನಿಗೀಡಾದ ಪ್ರದೇಶ (ಹೆಕ್ಟೇರ್‌ಗಳಲ್ಲಿ)</th></tr>
<tr><td>ಚಿಕ್ಕಮಗಳೂರು</td><td>9,625</td></tr>
<tr><td>ದಕ್ಷಿಣ ಕನ್ನಡ</td><td>2,000</td></tr>
<tr><td>ಕೊಡಗು</td><td>2,200</td></tr>
<tr><td>ಒಟ್ಟು</td><td>13,825</td></tr>
</table></td></tr>
<tr><td>ಇ)</td><td>ಸದರಿ ಎಲೆ ಚುಕ್ಕಿ ಮತ್ತು ಹಳದಿ ರೋಗ ಬಾಧೆಯಿಂದಾಗಿ ವೈಜ್ಞಾನಿಕವಾಗಿ ನಿಯಂತ್ರಿಸಲು ಮತ್ತು ಹಾನಿಗೀಡಾಗಿರುವ ಅಡಿಕೆ ತೋಟಗಳ ಪುನಶ್ಚೇತನಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;</td><td>ಅಡಿಕೆ ಎಲೆ ಚುಕ್ಕಿ ಮತ್ತು ಹಳದಿ ರೋಗ ಬಾಧೆಗಳನ್ನು ವೈಜ್ಞಾನಿಕವಾಗಿ ನಿಯಂತ್ರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳು ಈ ಕೆಳಗಿನಂತಿವೆ.<br>1. ಅಡಿಕೆ ಎಲೆಚುಕ್ಕೆ ರೋಗ ಮತ್ತು ಅಡಿಕೆ ಬೆಳೆಗೆ ತಗಲುವ ಹಳದಿ ಎಲೆ ರೋಗ ಇನ್ನಿತರೆ ಸಮಸ್ಯೆಗಳಿಗೆ ಶಾಶ್ವತ ಪರಿಹಾರವನ್ನು ಕೈಗೊಳ್ಳಲು ಶಿವಮೊಗ್ಗ ಜಿಲ್ಲೆಯಲ್ಲಿ ಶೃಂಗೇರಿಯ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಅಡಿಕೆ ಸಂಶೋಧನಾ</td></tr>
</table>

| | | |
|---|---|---|
| | | ಕೇಂದ್ರವನ್ನು ಸ್ಥಾಪಿಸಲಾಗಿದ್ದು, ಸಂಶೋಧನೆಗೆ ಕೈಗೊಳ್ಳಲಾಗುತ್ತಿದೆ.<br>2. ಕೇಂದ್ರ ಸರ್ಕಾರದ ವೈಜ್ಞಾನಿಕ ತಂಡವು ದಿನಾಂಕ: 20 ರಿಂದ 22 ನವೆಂಬರ್-2022ರಲ್ಲಿ ಎಲೆಚುಕ್ಕೆ ರೋಗ ಬಾಧಿತವಾದ ಜಿಲ್ಲೆಗಳಾದ ಶಿವಮೊಗ್ಗ, ದಕ್ಷಿಣ ಕನ್ನಡ ಜಿಲ್ಲೆ ಮತ್ತು ಚಿಕ್ಕಮಗಳೂರು ಜಿಲ್ಲೆಗಳಿಗೆ ಭೇಟಿ ನೀಡಿದೆ. ದಿನಾಂಕ: 04-01-2023 ರಂದು ಶೃಂಗೇರಿಯಲ್ಲಿ ಅಡಿಕೆ ಬೆಳೆ ಕುರಿತಾದ ಸಮಸ್ಯೆಗಳಿಗೆ ವೈಜ್ಞಾನಿಕ ಪರಿಹಾರವನ್ನು ಕಂಡುಕೊಳ್ಳಲು ಒಂದು ದಿನದ Brain Storming Session ನಡೆದು ವಿಜ್ಞಾನಿಗಳು, ರೈತರು ಮತ್ತು ಅಧಿಕಾರಿಗಳು ಭಾಗವಹಿಸಿ ಚರ್ಚಿಸಲಾಗಿರುತ್ತದೆ. ಜನವರಿ- 2023ರ ಮಾಹೆಯಲ್ಲಿ ವಿಜ್ಞಾನಿಗಳ ತಂಡವು ರಾಜ್ಯದ ಅಡಿಕೆ ಎಲೆಚುಕ್ಕೆ ರೋಗ ಬಾಧಿತ ಪ್ರದೇಶಗಳಿಗೆ ಭೇಟಿ ನೀಡಿ ಪರಿಹಾರೋಪಾಯಗಳನ್ನು ಶಿಫಾರಸ್ಸು ಮಾಡಿದೆ.<br>3. ಎಲೆಚುಕ್ಕೆ ರೋಗದ ಸಮಸ್ಯೆ ಸೇರಿದಂತೆ ಅಡಿಕೆ ಬೆಳೆಯ ಸಮಸ್ಯೆಗಳ ಬಗ್ಗೆ ಶಾಶ್ವತ ಪರಿಹಾರ ಕೈಗೊಳ್ಳಲು ಕೇಂದ್ರಿಯ ತೋಟದ ಬೆಳೆಗಳ ಸಂಶೋಧನ ಸಂಸ್ಥೆ (CPCRI) ಕಾಸರಗೋಡು ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ (UAHS) ಶಿವಮೊಗ್ಗಗಳಲ್ಲಿ ಸಂಶೋಧನೆ ಕೈಗೊಳ್ಳಲು, ಸಸ್ಯ ಸಂರಕ್ಷಣೆ, ಸಮಗ್ರ ಪೋಷಕಾಂಶ ನಿರ್ವಹಣೆ, ಅರಿವು ಮೂಡಿಸುವ ಕಾರ್ಯಕ್ರಮ, ಅಡಿಕೆ ಕಟಾವಿಗಾಗಿ ಬಳಸುವ ದೋಟಿಗಳಿಗೆ ಸಹಾಯಧನ ನೀಡುವುದು ಇತ್ಯಾದಿಗಳಿಗಾಗಿ ರೂ.197 ಕೋಟಿಗಳ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದ್ದು, ಪರಿಶೀಲನೆಯಲ್ಲಿದೆ.<br>4. "ಅಡಿಕೆಯಲ್ಲಿರುವ ಸಸ್ಯ ರಸಾಯನಿಕಗಳು ಮತ್ತು ಕೀಟನಾಶಕ ಔಷಧಿ ಅಂಶಗಳ ಮೌಲ್ಯಮಾಪನ- ಆರೋಗ್ಯ, ಸುರಕ್ಷತೆ ಮತ್ತು ಪರಿಣಾಮಕಾರಿತ್ವದ ಮಾಪನ" ಕುರಿತು ಸಂಶೋಧನೆಯನ್ನು ಕೈಗೊಳ್ಳಲು ಎಂ.ಎಸ್.ರಾಮಯ್ಯ ತಾಂತ್ರಿಕ ವಿಶ್ವವಿದ್ಯಾಲಯ ರವರಿಗೆ ತೋಟಗಾರಿಕೆ ಇಲಾಖೆಯಿಂದ ಅನುದಾನ ನೀಡಲಾಗಿದೆ. ಸಂಶೋಧನೆಯು ಅಂತಿಮ ಹಂತದಲ್ಲಿದೆ.<br>5. ಅಡಿಕೆ ಎಲೆಚುಕ್ಕೆ ಮತ್ತು ಹಳದಿ ಎಲೆ ರೋಗ ನಿಯಂತ್ರಣಕ್ಕಾಗಿ ಹೆಚ್ಚಿನ ಸಂಶೋಧನೆ ಕೈಗೊಳ್ಳಲು ರೂ. 50.00 ಲಕ್ಷಗಳನ್ನು ಕೇಂದ್ರಿಯ ತೋಟದ ಬೆಳೆಗಳ ಸಂಶೋಧನಾ ಕೇಂದ್ರ (CPCRI) ವಿಟ್ಲ ರವರಿಗೆ ಒದಗಿಸಲಾಗಿದೆ. |

6. ಅಡಿಕೆ ಹಳದಿ ಎಲೆ ರೋಗ ಬಾಧಿತ ಪ್ರದೇಶಗಳಲ್ಲಿ ಅಡಿಕೆ ಬೆಳೆಯ ಬದಲಾಗಿ ಇತರೆ ಪರ್ಯಾಯ ಬೆಳೆಗಳನ್ನು ಬೆಳೆಸಲು ರೈತರಿಗೆ ಪ್ರೋತ್ಸಾಹಿಸಲಾಗುತ್ತಿದೆ. ಅಡಿಕೆ ಬೆಳೆಗಾರರು ಇತರೆ ವಾಣಿಜ್ಯ ಬೆಳೆಗಳಾದ ಕೋಕೋ, ಕಾಳಮೆಣಸು, ತಾಳೆ ಬೆಳೆ, ಕಾಫಿ, ಬಾಳೆ, ತೆಂಗು, ಜಾಯಿಕಾಯಿ, ಬೆಣ್ಣೆಹಣ್ಣು ಇತ್ಯಾದಿ ಬೆಳೆಗಳನ್ನು ಬೆಳೆಯಲು ರೈತರಿಗೆ ಪ್ರತಿ ಹೆಕ್ಟೇರ್‌ಗೆ ಘಟಕವೆಚ್ಚದ ಶೇ.50ರಂತೆ 4 ಹೆಕ್ಟೇರ್‌ಗಳವರೆಗೆ ಸಹಾಯಧನ ನೀಡಲಾಗಿರುತ್ತದೆ. ಒಟ್ಟಾರೆ 812 ಹೆಕ್ಟೇರ್ ಪ್ರದೇಶ ವಿಸ್ತೀರ್ಣಕ್ಕೆ ರೂ. 488 ಲಕ್ಷಗಳನ್ನು ಸಹಾಯಧನ ನೀಡಲಾಗಿರುತ್ತದೆ.
7. ಮರುವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಯಡಿ (RWBCIS) ಅಡಿಕೆ ಬೆಳೆಯನ್ನು ಸಹ ಅಳವಡಿಸಲಾಗಿದ್ದು, ವಿವಿಧ ಹವಾಮಾನ ಅಂಶಗಳಾದ ಮಳೆ, ತಾಪಮಾನ, ಸಾಪೇಕ್ಷ ಆರ್ದ್ರತೆ ಇತ್ಯಾದಿ ಅಂಶಗಳನ್ನು ಪರಿಗಣಿಸಿ ಇವುಗಳ ಸಂಯೋಜನೆಯಿಂದ ಬೆಳೆಯ ಬೆಳವಣಿಗೆ, ಉತ್ಪಾದನೆ ಮತ್ತು ಇಳುವರಿಯ ಮೇಲೆ ಉಂಟಾಗಬಹುದಾದ ಪರಿಣಾಮಗಳನ್ನು ವೈಜ್ಞಾನಿಕ ರೀತಿಯಲ್ಲಿ ವಿಶ್ಲೇಷಿಸಿ ಇದರಲ್ಲಿ ರೋಗ ಮತ್ತು ಕೀಟಗಳಿಗೆ ಪೂರಕವಾದ ಅಂಶಗಳನ್ನು ಸಹ ಅಳವಡಿಸಿ ಅಡಿಕೆ ಬೆಳೆಯನ್ನು ವಿಮಾ ವ್ಯಾಪ್ತಿಗೆ ಒಳಪಡಿಸಲಾಗಿದೆ.
8. 2022-23ನೇ ಸಾಲಿನಲ್ಲಿ ಅಡಿಕೆ ಎಲೆಚುಕ್ಕೆ ರೋಗ ಭಾದಿತ ರೈತರಿಗೆ ಉಚಿತವಾಗಿ ಪ್ರತಿ ಹೆಕ್ಟೇರ್‌ಗೆ ರೂ.4000.00 ಗಳಂತೆ ಸಸ್ಯ ಸಂರಕ್ಷಣಾ ಔಷಧಿಗಳನ್ನು ತೋಟಗಾರಿಕೆ ಬೆಳೆಗಳ ಕೀಟ ಮತ್ತು ರೋಗಗಳ ಸಮಗ್ರ ನಿಯಂತ್ರಣ ಯೋಜನೆಯಡಿ ವಿತರಿಸಲಾಗಿದ್ದು, ಒಟ್ಟು ರೂ. 200.00ಲಕ್ಷಗಳನ್ನು 17264 ರೈತರಿಗೆ ವಿತರಿಸಲಾಗಿದೆ.
9. ಅಡಿಕೆ ಬೆಳೆ ಸೇರಿದಂತೆ ಕೃಷಿ ಮತ್ತು ತೋಟಗಾರಿಕೆ ಬೆಳೆಗಳಿಗೆ ಹಾನಿ ಉಂಟಾದ ಸಂದರ್ಭದಲ್ಲಿ NDRF /SDRF ಮಾರ್ಗಸೂಚಿಗಳನ್ವಯ ಕಂದಾಯ ಇಲಾಖೆಯ ಮೂಲಕ ಬಹುವಾರ್ಷಿಕ ತೋಟಗಾರಿಕೆ ಬೆಳೆಗಳಿಗೆ ಪ್ರತಿ ಹೆಕ್ಟೇರ್‌ಗೆ ರೂ.28,000/-ಗಳಂತೆ 2 ಹೆಕ್ಟೇರ್‌ಗಳಿಗೆ ಪರಿಹಾರ ನೀಡಲಾಗುತ್ತಿದೆ.
10. ಅಡಿಕೆ ಬೆಳೆಯ ಕಟಾವು ಹಾಗೂ ಸಿಂಪರಣೆಗಾಗಿ (ದೋಟಿ) ಖರೀದಿಸಿದ ಅಡಿಕೆ ಬೆಳೆಗಾರರಿಗೆ ಕೇಂದ್ರ ಸರ್ಕಾರದ ಮಾರ್ಗಸೂಚಿ ಅನುಸಾರ ಕೃಷಿ ಯಾಂತ್ರೀಕರಣ ಯೋಜನೆಯಡಿ ಸಹಾಯಧನ ನೀಡಲಾಗುತ್ತಿದೆ.

| | | |
|---|---|---|
| | | 11. ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ವತಿಯಿಂದ 2022-23 ನೇ ಸಾಲಿನಲ್ಲಿ ಮಾರ್ಚ್ ಮಾಹೆಯ ದಿನಾಂಕ:17 ರಿಂದ 20 ರವರೆಗಿನ ಕೃಷಿ ಮೇಳದಲ್ಲಿ ರೈತರಿಗೆ ಅಡಿಕೆ ಮೌಲ್ಯವರ್ದನೆಯಲ್ಲಿರುವ ಅವಕಾಶಗಳ ಕುರಿತು ತಾಂತ್ರಿಕ ಸಮಾವೇಶವನ್ನು ಏರ್ಪಡಿಸಲಾಗಿದೆ. ಅಡಿಕೆ ಮೌಲ್ಯವರ್ಧನೆಯಲ್ಲಿ ಕೃಷಿ ನವೋದ್ಯಮಿಗಳಿಂದ ತಾಂತ್ರಿಕ ಉಪನ್ಯಾಸ ಮತ್ತು ಅಡಿಕೆ ಉತ್ಪನ್ನಗಳ ಪ್ರದರ್ಶನ ಏರ್ಪಡಿಸಿ ಅಡಿಕೆ ಬೆಳೆಗಾರರಲ್ಲಿ ಜಾಗೃತಿ ಮೂಡಿಸಲಾಗಿದೆ. ಅಡಿಕೆ ಎಲೆ ಚುಕ್ಕೆ ರೋಗ ಮತ್ತು ಅಡಿಕೆಯಲ್ಲಿ ಸಮಗ್ರ ಕೀಟ ಮತ್ತು ರೋಗ ನಿರ್ವಹಣೆ ಕುರಿತು ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳಿಂದ 74 ವಿಶೇಷ ತರಬೇತಿಗಳನ್ನು 4,058 ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಅಡಿಕೆ ಬೆಳೆಗಾರರಿಗೆ ಏರ್ಪಡಿಸಲಾಗಿರುತ್ತದೆ.<br>12. ಅಡಿಕೆ ಎಲೆಚುಕ್ಕೆ ರೋಗದ ನಿಯಂತ್ರಣದ ಕುರಿತು ಕೈಪಿಡಿ, ಕರಪತ್ರಗಳು, ಸಮೂಹ ಮಾಧ್ಯಮಗಳು, ತರಬೇತಿ ಹಾಗೂ ಕಾರ್ಯಾಗಾರಗಳ ಮೂಲಕ ರೈತರಿಗೆ ಮಾಹಿತಿ ಒದಗಿಸಲಾಗಿದೆ. ವಿವಿಧ ಜಿಲ್ಲೆಗಳಲ್ಲಿ ಒಟ್ಟು 138 ತರಬೇತಿ ಮತ್ತು ಕಾರ್ಯಾಗಾರಗಳ ಮೂಲಕ ತಾಂತ್ರಿಕ ಮಾಹಿತಿ ಒದಗಿಸಲಾಗಿದೆ. |
| ಈ) | ಎಲೆ ಚುಕ್ಕಿ ಮತ್ತು ಹಳದಿ ರೋಗ ಬಾಧೆಯಿಂದಾಗಿ ಸಂಕಷ್ಟಕೀಡಾಗಿರುವ ಎಲ್ಲಾ ಸಂತ್ರಸ್ತ ಅಡಿಕೆ ಬೆಳೆಗಾರರಿಗೆ ಪೂರ್ಣ ಪರಿಹಾರದ ಮೊತ್ತವನ್ನು ವಿತರಿಸಲಾಗಿದೆಯೇ? (ವಿವರ ನೀಡುವುದು) | ಅಡಿಕೆ ಬೆಳೆ ಸೇರಿದಂತೆ ಕೃಷಿ ಮತ್ತು ತೋಟಗಾರಿಕೆ ಬೆಳೆಗಳಿಗೆ ಹಾನಿ ಉಂಟಾದ ಸಂದರ್ಭದಲ್ಲಿ NDRF/SDRF ಮಾರ್ಗಸೂಚಿಗಳನ್ವಯ ಕಂದಾಯ ಇಲಾಖೆಯ ಮೂಲಕ ಬಹುವಾರ್ಷಿಕ ತೋಟಗಾರಿಕೆ ಬೆಳೆಗಳಿಗೆ ಪ್ರತಿ ಹೆಕ್ಟೇರ್‌ಗೆ ರೂ.28,000/-ಗಳಂತೆ 2 ಹೆಕ್ಟೇರ್‌ಗಳಿಗೆ ಪರಿಹಾರ ನೀಡಲಾಗುತ್ತಿದೆ. 2022-23 |
| | | ನೇ ಸಾಲಿನಲ್ಲಿ ಕಂದಾಯ ಇಲಾಖೆಯಿಂದ ಅಂದಾಜು 16,318 ರೈತರಿಗೆ ರೂ.28.58 ಕೋಟಿಗಳ ಪರಿಹಾರ ವಿತರಿಸಲಾಗಿದೆ. ತೋಟಗಾರಿಕೆ ಇಲಾಖೆಯಲ್ಲಿ ಪರಿಹಾರ ವಿತರಿಸಲು ಯಾವುದೇ ಯೋಜನೆ ಇರುವುದಿಲ್ಲ. ಆದರೆ ಮೇಲಿನಂತೆ ಸಂತ್ರಸ್ಥ ಅಡಿಕೆ ಬೆಳೆಗಾರರ ಸಮಸ್ಯೆಗಳಿಗೆ ಕ್ರಮ ಕೈಗೊಳ್ಳಲಾಗಿದೆ. |

HORTI 206 HGM 2023

**(ಎಸ್.ಎಸ್.ಮಲ್ಲಿಕಾರ್ಜುನ್)**
ಗಣಿ ಮತ್ತು ಭೂ ವಿಜ್ಞಾನ, ತೋಟಗಾರಿಕೆ ಸಚಿವರು